**<u>2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>**

**<u>ಅಸಲು ದಾವೆ. ಸಂಖ್ಯೆ:573/2014</u>**

**ಪಿ.ಡಬ್ಲೂ:01 ಶ್ರೀ ರಾಮಕೃಷ್ಣಪ್ಪ**

**ಸಾಕ್ಷಿಯನ್ನು ದಿನಾಂಕಃ 23-07-2026 ರಂದು ಕರೆಸಿ ಪುನಃ ಪ್ರಮಾಣವಚನ ಭೋದಿಸಲಾಯಿತು.**

**<u>ಮುಂದುವರೆದ ಪಾಟೀಸವಾಲು ಃ ಪ್ರತಿವಾದಿಯ ಪರ ಶ್ರೀ.ಎಸ್ ಆರ್ ಬಿ ವಕೀಲರಿಂದ</u>**

1. ನನ್ನ ಪ್ರಕಾರ ಸದರಿ ಕ್ರಯದ ಕರಾರು ಪತ್ರವು ದಿಃ 14.12.2011 ರಂದು ಆಗಿದ್ದು, ಆಗ ಸಮಯ 2.00 ಗಂಟೆ ಆಗಿತ್ತು. ಸದರಿ ನಿಪಿ1 ಪತ್ರವನ್ನು 1 ನೇ ಪ್ರತಿವಾದಿ ಆದ ಮುನಿಯಪ್ಪ ರವರು ಖರೀದಿ ಮಾಡಿರುತ್ತಾರೆ. ನಿಪಿ1 ರ ಪತ್ರವನ್ನು ಸದರಿ ಕ್ರಯದ ಕರಾರು ಪತ್ರ ಆದ ದಿನಾಂಕದಂದೇ ಬಂಗಾರಪೇಟೆ ಇಂದ ಖರೀದಿ ಮಾಡಲಾಗಿರುತ್ತದೆ. ಸದರಿ ನಿಪಿ1 ರ ಪತ್ರವನ್ನು ಮ.2.00 ಗಂಟೆಗೆ ಖರೀದಿ ಮಾಡಲಾಗಿರುತ್ತದೆ. ಸದರಿ ನಿಪಿ1 ರ ಅಂಶಗಳನ್ನು 1 ನೇ ಪ್ರತಿವಾದಿಯು ಹೇಳಿ ಬರೆಸಿರುತ್ತಾರೆ. ನಿಪಿ1 ನ್ನು ಬರೆದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ಅವರು ಬಂಗಾರಪೇಟೆಯವರಾಗಿರುತ್ತಾರೆ. ಈಗಲೂ ಸಹ ದಾವಾ ಆಸ್ತಿಯ ಪಹಣಿಯು 1 ನೇ ಪ್ರತಿವಾದಿ ಹೆಸರಿನಲ್ಲಿ ಬರುತ್ತಿದೆ ಎಂದರೆ ಹೌದು.

2. ನಿಪಿ1 ಕ್ರಯದ ಕರಾರು ಪತ್ರದಂತೆ ಈಗಲೂ ಸಹ 1 ನೇ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನತೆಯನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸ್ವಾಧೀನದಲ್ಲಿದ್ದೇನೆ ಎನ್ನುತ್ತಾರೆ. ಸದರಿ ದಾವಾ ಆಸ್ತಿಯ ಸ್ವಾಧೀನತೆಗೆ ಸಂಬಂದ ಪಟ್ಟಂತೆ ಛಾಯ ಚಿತ್ರಗಳನ್ನು, ಬೆಳೆಯ ಪ್ರಮಾಣ ಪತ್ರವನ್ನು, ಏನಾದರೂ ಹಾಜರುಪಡಿಸಿದ್ದೇನಾ ಎಂದರೆ ಇಲ್ಲ. ಈಗಲೂ ಸಹ ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯೇ ಸ್ವಾಧೀನತದಲ್ಲಿದ್ದಾರೆ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

3. ನಿಪಿ2 ಹಣ ಸಂದಾಯ ರಸೀದಿಯನ್ನು 1 ನೇ ಪ್ರತಿವಾದಿಯು ದಿಃ12.12.2012 ರಂದು ಬರೆದುಕೊಟ್ಟಿರುತ್ತಾರೆ. ಸದರಿ ನಿಪಿ2 ರಸೀದಿಯನ್ನು ಪತ್ರ ಬರಹಗಾರರು ಬರೆದಿರುತ್ತಾರೆ. ಸದರಿ ನಿಪಿ2 ನ್ನು ಮಾಡುವ ಸಂದರ್ಬದಲಿಲ 60,000 ಹಣವನ್ನು ನಾನು 1 ನೇ ಪ್ರತಿವಾದಿಗೆ ನೀಡಿರುತ್ತೇನೆ. ಸದರಿ 60,000 ಹಣದಲ್ಲಿ ಎಲ್ಲವೂ ಕೂಡ 500 ರೂ ಮುಖ ಬೆಲೆಯ ನೋಟುಗಳಾಗಿತ್ತು. ದಿಃ12.12.2012 ರಂದು ಸದರಿ 60,000 ಹಣವು ನನ್ನ ಬಳಿ ಇತ್ತು ಎಂಬುವುದನ್ನು ತೋರಿಸುವ ದಾಖಲೆ ಏನಾದರೂ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನಾ ಎಂದರೆ ಇಲ್ಲ. ನನ್ನ ಪ್ರಕಾರ ನಿಪಿ2 ನ್ನು ಮಾಡುವ ಸಂದರ್ಬದಲ್ಲಿ 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳು ಹಾಜರಿದ್ದು ಹಣವನ್ನು ನನ್ನಿಂದ ಪಡೆದುಕೊಂಡಿರುತ್ತಾರೆ. ನನ್ನ ಪ್ರಕಾರ ನಿಪಿ2 ಕ್ಕೆ 1 ನೇ ಪ್ರತಿವಾದಿಯ ಮಕ್ಕಳು ಸಹಿ ಮಾಡಿರುವುದಿಲ್ಲ.

4. ನಿಪಿ4 ಲೀಗಲ್ ನೋಟೀಸನ್ನು ನಾನು ನನ್ನ ವಕೀಲರ ಮೂಲಕ 1 ನೇ ಪ್ರತಿವಾದಿಗೆ ನೀಡಿರುತ್ತೇನೆ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು ಕಾಂತಮ್ಮ ಎಂಬುವವರಿಗೆ ಮಾರಾಟ ಮಾಡಿದ್ದನ್ನು ತಿಳಿದು ನಾನು ನೀಡಿರುತ್ತೇನೆ ಎನ್ನುತ್ತಾರೆ.

ಸದರಿ ನಿಪಿ4 ನ್ನು ಕೊಡುವ ಮೊದಲು ಬೇರೆ ಯಾವುದಾದರೂ ನೋಟೀಸನ್ನು ನನ್ನ ವಕೀಲರ ಮೂಲಕ 1 ನೇ ಪ್ರತಿವಾದಿಗೆ ನೀಡಿದ್ದೇನಾ ಎಂದರೆ ಇಲ್ಲ. ಸದರಿ ನಿಪಿ4 ನೋಟೀಸಲ್ಲಿ ನಾನು 1 ನೇ ಪ್ರತಿವಾದಿಯ ಮಕ್ಕಳ ಬಗ್ಗೆ ನಮೂದು ಮಾಡಿಲ್ಲ ಮತ್ತು ಅವರಿಗೆ ನೋಟೀಸು ನೀಡಿಲ್ಲ ಎಂದರೆ ಸರಿ. ನಾನು ಈಗಾಗಲೇ ನಿಪಿ3 ರಂತೆ ದಾವಾ ಆಸ್ತಿಯ ಪಹಣಿಯನ್ನು ಹಾಜರುಪಡಿಸಿದ್ದು ಅದರಲ್ಲಿ ದಾವಾ ಆಸ್ತಿಯು ಪಿ ನಂಬರಿನಲ್ಲಿ ನಮೂದಿದೆ ಎಂದರೆ ಸರಿ. ಸದರಿ ದಾವಾ ಆಸ್ತಿಯು ಮೊದಲಿನಿಂದಲೂ ಇಲ್ಲಿಯವರೆಗೆ ಪಿ ನಂಬರಿನಲ್ಲಿ ಬರುತ್ತಿದೆ ಎಂದರೆ ಸರಿ.

5. ಸಾಮಾನ್ಯವಾಗಿ ಒಂದು ಆಸ್ತಿಯು ಪಿ ನಂಬರಿನಲ್ಲಿ ಇದ್ದರೆ ಕ್ರಯ ಪತ್ರ ಆಗುವುದಿಲ್ಲ ಎಂದರೆ ಸಾಕ್ಷಿಯು ಹೌದು ಆದರೆ 1 ನೇ ಪ್ರತಿವಾದಿಯು ಕ್ರಯ ಪತ್ರ ಮಾಡಿಕೊಡುತ್ತೇನೆ ಎಂದು ಆ ಸಮಯದಲ್ಲಿ ಹೇಳಿದ್ದರು ಎನ್ನುತ್ತಾರೆ. ನಿಪಿ1 ರಂತೆ 1 ನೇ ಪ್ರತಿವಾದಿ ಆಗಲೀ ಹಾಗೂ ಅವರ ಮಕ್ಕಳಾಗಲೀ ನನ್ನ ಹೆಸರಿಗೆ ಯಾವುದೇ ಕ್ರಯದ ಕರಾರು ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ1 ಮತ್ತು 2 ರಂತೆ ನಾನು ಯಾವುದೇ ಮೊತ್ತವನ್ನು 1 ನೇ ಪ್ರತಿವಾದಿಗೆ ಹಾಗೂ ಅವರ ಮಕ್ಕಳಿಗೆ ಪಾವತಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಗೋಸ್ಕರ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನಗೆ ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಯಾವುದೇ ಕ್ರಯ ಪತ್ರವನ್ನು ಮಾಡಿಕೊಡುವ ಆಸ್ಪದ ಬರುವುದಿಲ್ಲ ಎಂದರೆ ಸರಿಯಲ್ಲ.

6. 2011 ನೇ ಸಾಲಿನಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ 90,000 ಇತ್ತು. ಸಾಮಾನ್ಯವಾಗಿ ಮಾರುಕಟ್ಟೆ ಬೆಲೆಗಿಂತ ಹೆಚ್ಚು ಮೊತ್ತಕ್ಕೆ ಆಸ್ತಿಯನ್ನು ಮಾರಾಟ ಮಾಡುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**ಸಹಿ/-**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**